**ಇಂದು ದಿನಾಂಕಃ 21-11-2024 ಸಾಕ್ಷಿ ಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿಯರ ಪರವಾಗಿ ಶ್ರೀ RLH ವಕೀಲರಿಂದಃ-**

ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾವು ಒಟ್ಟು 4 ಜನ ಅಣ್ಣ ತಮ್ಮಂದಿರು. ಚಂದ್ರಪ್ಪ ನನ್ನ ಅಣ್ಣ. ನನ್ನ ಉಳಿದ ಸಹೋದರರ ಹೆಸರು ವೆಂಕಟಿ ಮತ್ತು ಅಡಿವೆಪ್ಪ ಇರುತ್ತಾರೆ. ನನ್ನ ಸಹೋದರರೆಲ್ಲರೂ ಊರಿನಲ್ಲಿ ಇರುತ್ತಾರೆ. ಪ್ರತಿವಾದಿ ಸಮಾಜ ಸೇವಕನಾಗಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಪ್ರತಿವಾದಿ ಕುಂಚವರಂ ಗ್ರಾಮ ಪಂಚಾಯತಿಯ ಸದಸ್ಯನಾಗಿರುತ್ತಾನೆ ಎಂದರೆ ಸರಿ. ಪ್ರತಿವಾದಿ ತಾಯಿ ಹೆಸರಿನಲ್ಲಿ ಸರ್ವೆ ನಂ. 45/2 ಮತ್ತು 48 ರಲ್ಲಿ ಜಮೀನು ಇದೆ. ಸದರಿ ಜಮೀನಿನಲ್ಲಿ ಸುಮಾರು 20 ರಿಂದ 30 ಮಾವಿನ ಗಿಡಗಳು ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವುಗಳಲ್ಲಿ 9 ಮಾವಿನ ಗಿಡಗಳನು ನಾನು ಪ್ರತಿವಾದಿಗೆ ಗೊತ್ತಿಲ್ಲದೆ ಕಟಾವು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸದರಿ ಮಾವಿನ ಗಿಡಗಳನು ಕಟಾವು ಮಾಡಿರುವ ಬಗ್ಗೆ ಕೇಳಿದಾಗ ನಾನು ಪ್ರತಿವಾದಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿ ನನ್ನ ವಿರುದ್ದ ದಿನಾಂಕೀ 06-02-2016 ರಂದು ಪ್ರಕರಣ ದಾಖಲಿಸಿರುತ್ತಾನೆ ಎಂದರೆ ಸಾಕ್ಷಿ ಪ್ರಕರಣ ದಾಖಲಿಸಿರುವುದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ಪಂಚನಾಮೆ ಮಾಡಿ ತನಿಖೆ ಕೈಗೊಂಡು ಚಾರ್ಜ ಶೀಟನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪ್ರಕರಣದಲ್ಲಿ ನನಗೆ ನ್ಯಾಯಾಲಯದಿಂದ ಬಿಡುಗಡೆ ಆಗಿರುತದೆ ಎಂದು ನುಡಿಯುತ್ತಾರೆ. ಸದರಿ ಚಾರ್ಜ ಶೀಟ ವಿರುದ್ದ ನಾನು ರದ್ದತಿಗಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿಲ್ಲ.

ನನ್ನ ವಿರುದ್ದ ಸೇಡಂನ ಸೆಸನ್ಸ ನ್ಯಾಯಾಲಯದಲ್ಲಿ ಕಲಂ 307 ರಡಿಯಲ್ಲಿ ನನ್ನ ವಿರುದ್ದ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ SC No. 284/2023 ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು ಒಟ್ಟು 37 ಜನ ಆರೋಪಿತರು ಇದ್ದೇವೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 1ನೇ ಆರೋಪಿಯಾಗಿದ್ದು ಮತ್ತು ನನ್ನ ಅಣ್ಣ 23ನೇ ಆರೋಪಿಯಾಗಿದ್ದಾನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ PSI ಉಪೇಂದ್ರ ರವರು ನಮ್ಮ ವಿರುದ್ದ ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿ. ಈ ಪ್ರಕರಣ ಬಿಟ್ಟು ನನ್ನ ವಿರುದ್ದ ಬೇರೆ 2 ರಿಂದ 3 ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ. ನನ್ನ ವಿರುದ್ದ ರೌಡಿಶೀಟರ ಸಹ ದಾಖಲಾಗಿದೆ ಎಂದರೆ ಸರಿ. CC No. 732/2017 ರಲಿ ತೀರ್ಪು ಆದ ನಂತರ ನಾನು ಪ್ರತಿವಾದಿ ಜೊತೆ ರಾಜಿಯಾಗಿದ್ದು ಆಗ ಪ್ರತಿವಾದಿ ಸದರಿ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸುವುದಿಲ್ಲ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ.

ನನ್ನ ಮುಖ್ಯವಿಚಾರಣೆಯಲ್ಲಿರುವ ಸಂಗತಿಗಳನ್ನು ನಾನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನನಗೆ 4 ಲಕ್ಷ ನಷ್ಟ ಆಗಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಪ್ರತಿವಾದಿ ನನ್ನ ವಿರುದ್ದ ಪ್ರಕರಣ ದಾಖಲಿಸಿರುವ ಕಾರಣ ನಾನು ಅವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಶಪಥ ಪತ್ರ ಸಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾನಹಾನಿ ಆಗಿಲ್ಲ ಮತ್ತು ಯಾವುದೇ ನಷ್ಟ ಆಗಿಲ್ಲ ಪ್ರತಿವಾದಿಗೆ ಸತಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ.**